

# ರಸಬೋಧೆ

ಸ್ವಾಮಿ ಭೂತೇಶಾನಂದ
**ಸಂಕಲನ :** ಸ್ವಾಮಿ ಋತಾನಂದ
**ಅನುವಾದ :** ಸ್ವಾಮಿ ಮಂಗಳಾತ್ಮಾನಂದ

ರಾಮಕೃಷ್ಣ ಮಹಾಸಂಘದ ೧೨ನೆಯ ಅಧ್ಯಕ್ಷರಾಗಿದ್ದ ಪರಮಪೂಜ್ಯ ಸ್ವಾಮಿ ಭೂತೇಶಾನಂದಜಿ ಮಹಾರಾಜ್ ಅವರು ಅತ್ಯಂತ ವಿನೋದಶೀಲರು, ಹಾಸ್ಯ ಪ್ರವೃತ್ತಿಯುಳ್ಳವರು. ಅವರು ಹೇಳುತ್ತಿದ್ದ ಕೆಲವು ಹಾಸ್ಯಪ್ರಸಂಗಗಳನ್ನು ಸಂಕಲಿಸಿ, ಬಂಗಾಳಿ ಭಾಷೆಯಲ್ಲಿ **'ರಸಬೋಧ್'** ಎಂಬ ಪುಸ್ತಕವನ್ನಾಗಿ ಪ್ರಕಟಿಸಲಾಗಿದೆ. ಇದರ ಸಂಕಲನಕಾರರಾದ ಸ್ವಾಮಿ ಋತಾನಂದಜಿ ಅವರು ರಾಮಕೃಷ್ಣ ಮಹಾಸಂಘದ ಬಂಗಾಳಿ ಮಾಸ ಪತ್ರಿಕೆಯಾದ 'ಉದ್ಬೋಧನ'ದ ಸಂಪಾದಕರು. ಅವುಗಳಲ್ಲಿ ಕೆಲವನ್ನು ಆರಿಸಿ ಕನ್ನಡಕ್ಕೆ ಅನುವಾದ ಮಾಡಿಕೊಟ್ಟಿರುವ ಸ್ವಾಮಿ ಮಂಗಳಾತ್ಮಾನಂದಜಿ ಅವರು ಪ್ರಸ್ತುತ, ಉದಕಮಂಡಲದ ರಾಮಕೃಷ್ಣ ಮಠದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

## ಮಹಾಪುರುಷ ಮಹಾರಾಜರ ಜೋಲ್

*(ಜೋಲ್ ಎನ್ನುವುದು ಬಂಗಾಳದ ಜನಜನಿತ ವ್ಯಂಜನ. ಹಸಿ ಶುಂಠಿ, ಜೀರಿಗೆ ರುಬ್ಬಿಹಾಕಿ ಅದಕ್ಕೆ ಒಂದು ಚೂರು ಒಗ್ಗರಣೆ ಹಾಕಿ ಮಾಡುತ್ತಾರೆ. ಇದಕ್ಕೆ ಕೆಲವು ತರಕಾರಿಗಳನ್ನೂ ಸೇರಿಸುತ್ತಾರೆ. ನಮ್ಮ ಸಾಂಬಾರಿನಂತೆ ದಿನವೂ ಊಟದಲ್ಲಿ ಅದು ಇದ್ದೇ ಇರಬೇಕು.)*

ಶ್ರೀರಾಮಕೃಷ್ಣರ ಪ್ರತ್ಯಕ್ಷ ಶಿಷ್ಯರಾಗಿದ್ದ ಪೂಜ್ಯ ಸ್ವಾಮಿ ಶಿವಾನಂದಜಿ ಮಹಾರಾಜ್ (ಮಹಾಪುರುಷ ಮಹಾರಾಜ್ ಎನ್ನುವುದು ವಾಡಿಕೆಯ ಹೆಸರು.) ಅವರ ಸಂಯಮಶಕ್ತಿ ಅಗಾಧವಾದದ್ದು. ಅವರದು ಎಣ್ಣೆ, ಮಸಾಲೆ, ಖಾರ – ಏನೂ ಇಲ್ಲದೆ, ಸಂಪೂರ್ಣ ರುಚಿರಹಿತವಾದ ಪಥ್ಯದ ಊಟ. ಅವರಿಗೆಂದೇ ವಿಶೇಷವಾಗಿ ಒಂದು ರೀತಿಯ ಜೋಲ್ ತಯಾರಾಗುತ್ತಿತ್ತು. ಅದೇ ಅವರ ಪ್ರಧಾನ ವ್ಯಂಜನ. ಅವರ ಸೋದರ ಸಂನ್ಯಾಸಿಗಳು ಅದಕ್ಕೆ 'ಮಹಾಪುರುಷರ ಜೋಲ್' ಎಂದೇ ಹೆಸರು ಕಟ್ಟಿದ್ದರು. ಬೇಲೂರು ಮಠದಲ್ಲಿ ಅದನ್ನೇ ಅವರು ತೃಪ್ತಿಪೂರ್ವಕವಾಗಿ ನಿತ್ಯವೂ ಸೇವಿಸಬೇಕಾಗಿತ್ತು. ಈ ಜೋಲಿನ ಬಗ್ಗೆ ಒಂದು ಸ್ವಾರಸ್ಯಕರವಾದ ಕಥೆಯನ್ನು ಪೂಜ್ಯ ಸ್ವಾಮಿ ಭೂತೇಶಾನಂದಜಿ ಹೇಳುತ್ತಿದ್ದರು. ಅದು ಹೀಗಿದೆ:

ಮಹಾಪುರುಷ್ ಮಹಾರಾಜರು ಕಾಶಿಯಲ್ಲಿ ಇದ್ದಾಗಲೂ ಅವರಿಗೆ ಈ ಜೋಲೇ ಆಹಾರವಾಗಿತ್ತು. ಆದರೆ ಕಾಶಿಯಲ್ಲಿ ಮಾತ್ರ ಇದಕ್ಕೆ **'ಕಾಶಿಯ ಬ್ರಹ್ಮಜೋಲ್'** ಎಂಬ ಹೆಸರು ಬಂದಿತ್ತು. ಕಾಶಿ ಆಶ್ರಮದಲ್ಲಿ ಈ ಜೋಲಿನ ಬಗ್ಗೆಯೇ ಒಂದು ವಿವರಣೆ ಪ್ರಚಲಿತವಾಗಿತ್ತು. ಹಾಸ್ಯದಿಂದ ಕೂಡಿದ ಈ ವಿವರಣೆಯನ್ನು ಸಾಧುಬ್ರಹ್ಮಚಾರಿಗಳು ಮಾತನಾಡುವ ಸಮಯದಲ್ಲಿ ರಸವತ್ತಾಗಿ ವರ್ಣಿಸುತ್ತಿದ್ದರು. ಅದರ ವರ್ಣನೆ ಹೀಗಿದೆ: ಕಠೋಪನಿಷತ್ತಿನಲ್ಲಿ ಒಂದು ಮಂತ್ರವಿದೆ. ಅದರಲ್ಲಿ ನಿರ್ವಿಶೇಷ, ನಿರುಪಾಧಿಕ ಬ್ರಹ್ಮನ ವರ್ಣನೆ ಮಾಡಲಾಗಿದೆ. ಅದು 'ಅಶಬ್ದಮ್ ಅಸ್ಪರ್ಶಮ್' ಎಂದು ಆರಂಭವಾಗುತ್ತದೆ. ಈ ಮಂತ್ರದಲ್ಲಿ ವರ್ಣಿತವಾದ ಬ್ರಹ್ಮನ ಸ್ವರೂಪಲಕ್ಷಣಕ್ಕೂ, 'ಮಹಾಪುರುಷರ ಜೋಲ್'ಗೂ ಅನೇಕ ಸಮಾನತೆಗಳಿವೆಯಂತೆ. ಈ ಸಾಮ್ಯಗಳು ಸೋಜಿಗದಂತೆ ಕಂಡುಬಂದರೂ, ಸತ್ಯ ಕೂಡ.

**ಅಶಬ್ದಮ್ :** 'ಅಶಬ್ದಮ್' ಅಂದರೆ ಶಬ್ದರಹಿತ ತಾನೇ. ಈ ಜೋಲಿನಲ್ಲಿ ಒಂದು ಚೂರು ತರಕಾರಿ ಕೂಡ ಇಲ್ಲ. ಇದನ್ನು ಮಾಡುವಾಗ ಶಬ್ದವೇ ಆಗುವುದಿಲ್ಲ. ಏಕೆಂದರೆ ತಳದಲ್ಲಿ ಇರುವ ತರಕಾರಿಯನ್ನು ಸೌಟಿನಿಂದ ತಿರುಗಿಸಿದರೆ ತಾನೇ ಶಬ್ದವಾಗುವುದು! ಹೀಗಾಗಿ ಈ ಜೋಲ್ ಕೂಡ ಅಶಬ್ದಮ್.

**ಅಸ್ಪರ್ಶಮ್ :** ಸ್ಪರ್ಶವೇ ಇಲ್ಲದ್ದು. ಈ ಜೋಲ್ ಎಷ್ಟು ತೆಳ್ಳಗೆ ನೀರಿನಂತೆ ಇತ್ತೆಂದರೆ, ಅದರಲ್ಲಿ ಮುಟ್ಟಲು ಏನೂ ಇರುತ್ತಿರಲಿಲ್ಲ. ಹಾಗಾಗಿ ಇದು ಅಸ್ಪರ್ಶಮ್.

**ಅರೂಪಮ್ :** ರೂಪವಿಲ್ಲದ್ದು. ಇದರಲ್ಲಿ ಮಸಾಲೆ, ಎಣ್ಣೆ ಏನೂ ಇರುತ್ತಿರಲಿಲ್ಲ. ಆದ್ದರಿಂದ ಯಾವುದೇ ಬಣ್ಣ ಇರುತ್ತಿರಲಿಲ್ಲ. ಹೀಗಾಗಿ ಅದು ಅರೂಪಮ್.

**ಅವ್ಯಯಂ :** ವ್ಯಯವಾಗದ್ದು. ಇದರ ವಿವರಣೆ ಅದ್ಭುತ. ಇದನ್ನು ಎಷ್ಟು ಸೇವಿಸಿದರೂ ಇನ್ನಷ್ಟು ಉಳಿಯುತ್ತಿತ್ತು, ಖರ್ಚಾಗುತ್ತಲೇ ಇರುತ್ತಿರಲಿಲ್ಲ!

**ಅರಸಂ :** ಇದಕ್ಕೆ ಯಾವ ರುಚಿಯೂ ಇರುತ್ತಿರಲಿಲ್ಲ.

**ಅಗಂಧವತ್ :** ಇದಕ್ಕೆ ಒಗ್ಗರಣೆಯೇ ಇಲ್ಲದ ಕಾರಣ, ಪರಿಮಳವೇ ಇರುತ್ತಿರಲಿಲ್ಲ.

**ಅನಾದಿ :** ಈ ಜೋಲ್ ಎಷ್ಟು ವರ್ಷಗಳಿಂದ ಹೀಗೆ ತಯಾರಿಸಲ್ಪಡುತ್ತಿದೆ ಎನ್ನುವುದು ಯಾರಿಗೂ ಗೊತ್ತಿಲ್ಲ. ಹೀಗಾಗಿ ಇದು ಅನಾದಿ.

**ಅನಂತ :** ಯಾವುದಕ್ಕೆ ಆದಿ ಇಲ್ಲವೋ, ಅದಕ್ಕೆ ಅಂತ್ಯವೂ ಇಲ್ಲ. ಏಕೆಂದರೆ ಒಂದು ದಿನವೂ ಇದನ್ನು ಮಾಡದೆ ಇರುತ್ತಿರಲಿಲ್ಲ.

**ಮಹತ್ :** ಇದು ಮಹತ್ವಪೂರ್ಣ ವ್ಯಕ್ತಿಗಳಿಗಾಗಿಯೇ ತಯಾರಿಸುವಂಥದ್ದು. ಇದನ್ನು ತಿನ್ನುವವರು ನಿಜಕ್ಕೂ ಮಹಾತ್ಮರೇ ಸರಿ!

**ಪರಮ:** ಈ ರೀತಿಯ ಖಾದ್ಯ ಬೇರೆ ಯಾವುದೂ ಇಲ್ಲ. ಎಲ್ಲಕ್ಕಿಂತ ಇದು ವಿಲಕ್ಷಣವಾದದ್ದು.

**ಅನುಪಮ :** ಇದಕ್ಕೆ ಬೇರೆ ಯಾವ ವಸ್ತುವೂ ಸಾಟಿ ಇಲ್ಲ. ಇದನ್ನು ಯಾವುದಕ್ಕೂ ಹೋಲಿಸಲು ಆಗುವುದಿಲ್ಲ.


**ಧ್ರುವಮ್ :** ನಿತ್ಯವಾದದ್ದು. ಬೇರೆ ಯಾವ ವ್ಯಂಜನವನ್ನು ಮಾಡದಿದ್ದರೂ, ಇದನ್ನು ಮಾತ್ರ ತಪ್ಪದೆ ಮಾಡುತ್ತಿದ್ದರು. ಹೀಗಾಗಿ ಇದು ನಿತ್ಯವಾದ ವಸ್ತು.

**ನಿಚಾಯ್ಯ ತಾನ್ ಮೃತ್ಯುಮುಖಾತ್ ಪ್ರಮುಚ್ಯತೇ:** ಬ್ರಹ್ಮಸಾಕ್ಷಾತ್ಕಾರವಾದಾಗ ಸಾಧಕನು ಮೃತ್ಯುವಿನ ಬಾಯಿಯಿಂದ ಪಾರಾಗುತ್ತಾನೆ. ಹಾಗೆಯೇ, ಅದೇ ರೀತಿ ಇರುವ ಈ ಜೋಲನ್ನು ಸ್ವಲ್ಪ ತಿಂದರೂ, ಮೃತ್ಯುಭಯ ತೊಲಗಿಹೋಗಿ ಬ್ರಹ್ಮದರ್ಶನವಾದಂತೆಯೇ ಆಗುತ್ತಿತ್ತು. ಅಂದರೆ ತಿಂದರೂ ಏನೂ ತಿನ್ನದಂಥ ನಿರ್ವಿಕಾರ ಅನುಭವವೇ ಆಗುತ್ತಿತ್ತು!

### ಶಿಕ್ಷಕರಲ್ಲಿ ಇರಬೇಕಾದ

# ಮೂರು ಗುಣಗಳು

**ಸ್ವಾಮಿ ರಾಘವೇಶಾನಂದ**




**ವಿ**ದ್ಯಾರ್ಥಿಗಳು ಪ್ರಭಾವಿತರಾಗುವುದು ಶಿಕ್ಷಕರಲ್ಲಿನ ಈ ಮೂರು ಅಂಶಗಳಿಂದ:

**೧) ಜ್ಞಾನ ೨) ಶೀಲ ೩) ಭಾವ**

**ಮೊದಲನೆಯದು ಜ್ಞಾನ:** ಅಧ್ಯಾಪಕರು ತಾವು ಬೋಧಿಸುವ ವಿಷಯದಲ್ಲಿ ವಿಸ್ತಾರವೂ ನಿಖರವೂ ಆದ ಜ್ಞಾನವನ್ನು ಹೊಂದಿರಬೇಕಾಗುತ್ತದೆ. ಮತ್ತು ವಿದ್ಯಾರ್ಥಿಗಳಲ್ಲಿಯೂ ಅವರು ಪಾಠ ಮಾಡುವ ಶೈಲಿ ಆ ಜ್ಞಾನದಾಹವನ್ನು ಉಂಟು ಮಾಡುವಂತಿರಬೇಕು! ಆಗ ಹೊಚ್ಚ ಹೊಸ ರಕ್ತ ತುಂಬಿಕೊಂಡಿರುವ ವಿದ್ಯಾರ್ಥಿಗಳ ಅಪಾರ ಶಕ್ತಿಯು ಉನ್ನತ ಗುರಿಯತ್ತ ಹರಿಯಲಾರಂಭಿಸುತ್ತದೆ. ಅಲ್ಲದೆ ಜ್ಞಾನದಾಹದ ಕಾವನ್ನು ಎಬ್ಬಿಸಿ, ನಂತರ ಪಾಠ ಮಾಡಿದಾಗ ಅದು ಮನದಲ್ಲಿ ಚೆನ್ನಾಗಿ ಬೇರೂರುತ್ತದೆ. ಇದು ಕಬ್ಬಿಣಕ್ಕೆ ರೂಪ ಕೊಟ್ಟಂತೆ. ಕಬ್ಬಿಣವನ್ನು ಕಾಯಿಸದೆ ಬಡಿದರೆ ವೃಥಾ ಆಯಾಸವಷ್ಟೆ. ಆದರೆ ಚೆನ್ನಾಗಿ ಕಾದ ಕಬ್ಬಿಣವನ್ನು ಬಡಿದರೆ ಬಯಸಿದ ರೂಪಕ್ಕೆ ಅದನ್ನು ತಿರುಗಿಸಬಹುದು. ಅಂತೆಯೇ ಕಲಿಯಬೇಕೆಂಬ ಹಂಬಲವನ್ನು ಕೆರಳಿಸಿ, ಬಳಿಕ ಪಾಠಹೇಳಿದರೆ ಅದು ಸ್ಪಷ್ಟವಾಗಿ ಅರ್ಥವಾಗುತ್ತದೆ ಮತ್ತು ನೆನಪಿನಲ್ಲಿ ಸದಾ ಹಸನಾಗಿ ಉಳಿಯುತ್ತದೆ.

**ಎರಡನೆಯದಾಗಿ ಶಿಕ್ಷಕರ ಶೀಲ:** ಶೀಲ ಅಥವಾ ಚಾರಿತ್ರ್ಯವು ಎಳೆಯ ಮನಸ್ಸುಗಳ ಮೇಲೆ ಆಳವಾಗಿ ಮುದ್ರೆಯೊತ್ತುತ್ತದೆ. ಶೀಲ ಎಂದರೇನು? ಇದು ಬಹಳ ದೊಡ್ಡ ವಿಷಯ. ಶೀಲ ಅಥವಾ ಚಾರಿತ್ರ್ಯದ ಕುರಿತಾಗಿ ಸ್ವಾಮಿ ವಿವೇಕಾನಂದರ ನುಡಿಗಳು ಮನನೀಯ. ಅವರೆನ್ನುತ್ತಾರೆ, "ಒಬ್ಬ ವ್ಯಕ್ತಿಯ ಚಾರಿತ್ರ್ಯವು ಅವನ ಪ್ರವೃತ್ತಿಗಳ ಹಾಗೂ ಮನಸ್ಸಿನ ಒಲವುಗಳ ಮೊತ್ತವಲ್ಲದೆ ಮತ್ತೇನಲ್ಲ. ಈಗ ನಾವು ಏನಾಗಿರುವೆವೋ ಅದು ನಮ್ಮ ಆಲೋಚನೆಗಳ ಪರಿಣಾಮ. ಆಲೋಚನೆಗಳು ಜೀವಂತವಾದುವು ಹಾಗೂ ಬಹುದೂರ ಪಯಣಿಸಬಲ್ಲವು. ಆದ್ದರಿಂದ ನೀವೇನು ಆಲೋಚಿಸುವಿರಿ, ಭಾವಿಸುವಿರಿ ಎಂಬ ವಿಷಯದಲ್ಲಿ ಎಚ್ಚರವಿರಲಿ. ನಾವು ಗೈಯುವ ಕರ್ಮ, ಶರೀರದ ಪ್ರತಿಯೊಂದು ಚಲನವಲನ ಮತ್ತು ನಾವು ಮಾಡುವ ಪ್ರತಿಯೊಂದು ಆಲೋಚನೆ – ಎಲ್ಲವೂ ನಮ್ಮ ಮನಸ್ಸಿನ ಮೇಲೆ ಮುದ್ರೆಯೊತ್ತುತ್ತವೆ. ಹೀಗೆ ಮನಸ್ಸಿನ ಮೇಲೆ ಒತ್ತಲ್ಪಟ್ಟ ಮುದ್ರೆಗಳ (ಸಂಸ್ಕಾರಗಳ) ಮೊತ್ತವೇ, ನಾವು ಯಾರು, ಎಂಥವರು ಎಂಬುದನ್ನು ನಿರ್ಧರಿಸುವಂಥದು. ಪ್ರತಿಯೊಬ್ಬ ವ್ಯಕ್ತಿಯ ಚಾರಿತ್ರ್ಯವನ್ನು ನಿರ್ಣಯಿಸುವಂಥದು ಈ ಸಂಸ್ಕಾರಗಳ ಮೊತ್ತವೇ. ವ್ಯಕ್ತಿಯಲ್ಲಿ ಒಳ್ಳೆಯ ಸಂಸ್ಕಾರಗಳು ಹೆಚ್ಚಾಗಿದ್ದರೆ ಅವನದು ಸಚ್ಚಾರಿತ್ರ್ಯವಾಗುತ್ತದೆ, ಕೆಟ್ಟ ಸಂಸ್ಕಾರಗಳೇ ಅಧಿಕವಾಗಿದ್ದರೆ ದುಶ್ಚಾರಿತ್ರ್ಯವೆನಿಸುತ್ತದೆ."

ಆದ್ದರಿಂದ ಶಿಕ್ಷಕರು, ಅಧ್ಯಾಪಕರು ತಮ್ಮ ಮನಸ್ಸು, ಮಾತು, ಕೃತಿಗಳಲ್ಲಿ ನಿರ್ಮಲರಾಗಿರಬೇಕಾದದ್ದು ಬಹಳ ಮುಖ್ಯ. ಆಗಲೇ ಅವರಲ್ಲಿ ಶೀಲಬಲ ನೆಲೆಗೊಳ್ಳುವುದು. ಶಿಕ್ಷಕರ ವ್ಯಕ್ತಿತ್ವದಿಂದ ಶೀಲಸೌರಭ ಹೊರಸೂಸುತ್ತಿದ್ದರೆ ಆ ವಿದ್ಯಾಸಂಸ್ಥೆಯ ವಾತಾವರಣವೂ ತಿಳಿಯಾಗಿರುತ್ತದೆ, ವಿದ್ಯಾರ್ಥಿಗಳ ಮನಸ್ಸೂ ಪುಳಕಿತವಾಗುತ್ತದೆ.

**ಮೂರನೆಯದಾಗಿ ಭಾವ:** ಭಾವ ಅಂದರೆ ದೇಹಭಾವ ಮತ್ತು ಮನಸ್ಸಿನ ಭಾವ. ಶಿಕ್ಷಕರ ಕೈಕಾಲುಗಳ ಚಲನೆ, ಮುಖದ ಹಾವಭಾವ – ಇವು ಕೂಡ ವಿದ್ಯಾರ್ಥಿಗಳ ಮನಸ್ಸಿನ ಮೇಲೆ ತುಂಬ ಪ್ರಭಾವ ಬೀರುತ್ತದೆ. ಎಷ್ಟರಮಟ್ಟಿಗೆಂದರೆ ಎಷ್ಟೋ ಸಲ ವಿದ್ಯಾರ್ಥಿಗಳು ಪಾಠವನ್ನಾದರೂ ಮರೆತಾರು, ಆದರೆ ಶಿಕ್ಷಕರ ಅಂಗಾಂಗಗಳ ಆಟವನ್ನು ಮರೆಯುವುದಿಲ್ಲ ! ಆದ್ದರಿಂದ ಶಿಕ್ಷಕರು ತಮ್ಮ ಚಲನವಲನಗಳನ್ನು ಸಭ್ಯಗೊಳಿಸಿಕೊಳ್ಳುವತ್ತ ಸಾಕಷ್ಟು ನಿಗಾ ಇಡಬೇಕು. ಇವಿಷ್ಟು ದೇಹಭಾವಕ್ಕೆ ಸಂಬಂಧಿಸಿದ ವಿಷಯವಾಯಿತು.

ಇನ್ನು, ಶಿಕ್ಷಕರು ಯಾವ ಮನೋಭಾವದಿಂದ ಪಾಠ ಮಾಡುತ್ತಾರೆ ಎಂಬುದು ಬಹಳ ಮುಖ್ಯ. ಇದು ಸ್ವಲ್ಪ ಸೂಕ್ಷ್ಮ ವಿಚಾರವಾದರೂ ಅಷ್ಟೇ ಪ್ರಬಲವಾದ ಅಂಶವೂ ಹೌದು. ಇದು ಸೂಕ್ಷ್ಮ

**'ಶಿಕ್ಷಕನೇ ರಾಷ್ಟ್ರದ ರಕ್ಷಕ' ಎಂಬ ಮಾತು ಪ್ರಚಲಿತವಾಗಿದೆ. ರಾಷ್ಟ್ರದ ಭಾವೀ ಪ್ರಜೆಗಳಾದ ವಿದ್ಯಾರ್ಥಿಗಳ ಭವಿಷ್ಯನಿರ್ಮಾಪಕರು ಶಿಕ್ಷಕರು. ಹೀಗಾಗಿ ಅವರ ವ್ಯಕ್ತಿತ್ವವೂ ಸರ್ವಾಂಗಸುಂದರವಾಗಿರಬೇಕಾದದ್ದು ಅತ್ಯಂತ ಅವಶ್ಯಕ. ಈ ನಿಟ್ಟಿನಲ್ಲಿ ಅವರು ಬೆಳೆಸಿಕೊಳ್ಳಬೇಕಾದ ಮೂರು ಮೂಲಭೂತ ಗುಣಗಳ ಉಪಯುಕ್ತ ವಿಶ್ಲೇಷಣೆಯನ್ನು ಈ ಲೇಖನದಲ್ಲಿ ಕಾಣುತ್ತೇವೆ. ಬೆಳಗಾವಿಯ ರಾಮಕೃಷ್ಣ ಮಿಷನ್ನಿನ ಮುಖ್ಯಸ್ಥರಾದ ಪೂಜ್ಯ ಸ್ವಾಮೀಜಿಯವರು, ನುರಿತ ಬರಹಗಾರರು, ಪ್ರಭಾವಶಾಲಿ ವಾಗ್ಮಿಗಳು ಮತ್ತು ಸಂಘಟಕರು. ಇವರ ಹಲವಾರು ಪುಸ್ತಕಗಳು ಪ್ರಕಟವಾಗಿವೆ.**

ಏಕೆಂದರೆ, ಮನೋಭಾವವೆಂಬುದು ಮೇಲ್ನೋಟಕ್ಕೆ ಗೋಚರಿಸುವುದಿಲ್ಲ. ಆದರೂ ಅದು ಪ್ರಬಲ. ಏಕೆಂದರೆ, ಇದು ಪರಿಣಾಮ ಬೀರದಿರುವುದಿಲ್ಲ!

"ಶಿಕ್ಷಕನು ತಾನು ಕಲಿಸುತ್ತಿದ್ದೇನೆ ಎಂದು ತಿಳಿದರೆ ಅವನು ಎಲ್ಲವನ್ನೂ ಕೆಡಿಸುತ್ತಿದ್ದಾನೆಂದೇ ಅರ್ಥ. ಏಕೆಂದರೆ ಎಲ್ಲ ಜ್ಞಾನವೂ ಅದಾಗಲೇ ಮನುಷ್ಯನೊಳಗೇ ಇದೆ. ಅದನ್ನು ಜಾಗೃತಗೊಳಿಸಬೇಕಾಗಿದೆ, ಅಷ್ಟೇ. ಆ ಜಾಗೃತಿಯನ್ನು ಉಂಟುಮಾಡುವುದಷ್ಟೇ ಅಧ್ಯಾಪಕನ ಕಾರ್ಯ. ಬಾಲಕರು ಸ್ವಬುದ್ಧಿ ಉಪಯೋಗಿಸಿ ತಮ್ಮ ಕಣ್ಣು, ಕಿವಿ, ಕೈಕಾಲುಗಳನ್ನು ಸಮರ್ಪಕವಾಗಿ ಬಳಸಿಕೊಳ್ಳುವುದನ್ನು ತಾವೇ ಕಲಿಯಲಿ. ಅದಕ್ಕೆ ಅಣಿ ಮಾಡಿಕೊಡುವುದಷ್ಟೆ ನಮ್ಮ ಕಾರ್ಯ" ಎನ್ನುತ್ತಾರೆ ಸ್ವಾಮಿ ವಿವೇಕಾನಂದರು.

ನಿಜಕ್ಕೂ ಶಿಕ್ಷಣ ಎಂಬುದನ್ನು ಹೊರಗಿನಿಂದ ಯಾರೂ ನೀಡಲು ಸಾಧ್ಯವಿಲ್ಲ. ಆದರೆ ಮನುಷ್ಯ ಮನಸ್ಸು ಮಾಡಿದರೆ ಶಿಕ್ಷಣ ಪಡೆದುಕೊಳ್ಳಬಲ್ಲ. ಈ ಕಲಿಕೆಯ ವಿಷಯವೇ ಹಾಗೆ. ಹೊರಗಿನಿಂದ ಯಾರೂ ತುರುಕಲು ಸಾಧ್ಯವಿಲ್ಲ; ಆದರೆ ಕಲಿಯುವ ಮನಸ್ಸಿದ್ದರೆ ಕಲಿಸುವವರಿಲ್ಲದಿದ್ದರೂ ಅದನ್ನು ಮನುಷ್ಯ ಕಲಿತುಕೊಳ್ಳುತ್ತಾನೆ.

ಈ ಕುರಿತು ಸ್ವಾಮಿ ವಿವೇಕಾನಂದರು ಹೇಳಿರುವ ಮಾತುಗಳು ತುಂಬ ಬೋಧಪ್ರದವಾಗಿವೆ. ಅವರೆನ್ನುತ್ತಾರೆ, "ನಾವು ಪ್ರತಿಯೊಬ್ಬರೂ ನಮಗೆ ನಾವೇ ಶಿಕ್ಷಣ ಕೊಟ್ಟುಕೊಳ್ಳಬೇಕು. ಎಂದೂ ಯಾರೂ ಇನ್ನೊಬ್ಬರಿಂದ ಶಿಕ್ಷಣ ಪಡೆದಿದ್ದು ಎಂಬುದು ಇಲ್ಲವೇ ಇಲ್ಲ. ಹೊರಗಣ ಶಿಕ್ಷಕರು, ಅಧ್ಯಾಪಕರು ಏನಿದ್ದರೂ ಸಲಹೆ – ಸೂಚನೆ ಕೊಡಬಹುದು, ಅಷ್ಟೆ. ಆ ಸಲಹೆಯು ಅಂತರಂಗದಲ್ಲಿರುವ ಗುರುಶಕ್ತಿಯನ್ನು ತಟ್ಟಿ ಎಬ್ಬಿಸಿ, ನಾವು ವಿಷಯಗಳನ್ನು ಅರಿತುಕೊಳ್ಳುವಂತೆ ಮಾಡುತ್ತದೆ. ಆಗ ನಮ್ಮೊಳಗೇ ಇರುವ ಗ್ರಹಣಶಕ್ತಿ, ಆಲೋಚನಾಶಕ್ತಿಗಳ ಮೂಲಕ ನಮಗೆ ವಿಷಯಗಳು ಸ್ಪಷ್ಟವಾಗುತ್ತವೆ ಮತ್ತು ನಮ್ಮ ಅಂತರಂಗದಲ್ಲೇ ಆ ಅರಿವು ಮೂಡುತ್ತದೆ."

ಈ ನುಡಿಗಳನ್ನು ಶಿಕ್ಷಕರು, ಅಧ್ಯಾಪಕರು ಹೃದ್ಗತ ಮಾಡಿಕೊಂಡು ನಮ್ರತೆಯನ್ನೂ, ನೈಜ ವಿನಯವನ್ನೂ ರೂಢಿಸಿಕೊಳ್ಳಬೇಕು. ಆಗ ಅವರ ಅರಿವಿನ ಹರಹು ಹೆಚ್ಚಲು ದಾರಿಯಾಗುವುದಲ್ಲದೇ, ಶಿಕ್ಷಕ–ವಿದ್ಯಾರ್ಥಿ ಸಂಬಂಧವೂ ಮಧುರವಾಗುತ್ತದೆ! ಅಧ್ಯಾಪಕರು ಎಷ್ಟೇ ನಿಷ್ಣಾತರಾದರೂ ಕಿರಿಯರಿಂದ ಕಲಿಯುವಂಥದ್ದೂ ಸಾಕಷ್ಟಿರುತ್ತದೆಯಲ್ಲವೇ? ಈ ದೃಷ್ಟಿಕೋನದಿಂದ ನೋಡಿದಾಗ, ಒಂದೊಂದು ವಿದ್ಯಾಸಂಸ್ಥೆಯೂ ಜ್ಞಾನಸಂಗಮವೇ ಸರಿ. ಕಲಿಸುವವರು – ಕಲಿಯುವವರಿಬ್ಬರೂ ಕಲೆತು ಹೆಚ್ಚಿನದನ್ನು ಕಲಿಯುತ್ತಾ ಪರಿಪೂರ್ಣರಾಗುವುದೇ ಶಿಕ್ಷಣದ ಸೂಕ್ತ ಪ್ರಣಾಳಿ. ಆದ್ದರಿಂದಲೇ ವೇದಕಾಲದಲ್ಲಿ ಗುರು – ಶಿಷ್ಯರಿಬ್ಬರೂ ಕೂಡಿಯೇ ಪ್ರಾರ್ಥಿಸುತ್ತಿದ್ದರು. ಈ ಪ್ರಾರ್ಥನೆಯೇ **'ಸಹನಾ ಭವತು'** ಎಂಬ ಪ್ರಸಿದ್ಧ ಮಂತ್ರದಲ್ಲಿ ಮೂಡಿಬಂದಿದೆ. ಈ ಮಂತ್ರದಲ್ಲಿ **ಸಹವೀರ್ಯಂ ಕರವಾವಹೈ । ತೇಜಸ್ವಿನಾವಧೀತಮಸ್ತು......** ಎಂಬ ಸಾಲುಗಳಿವೆಯಲ್ಲ, ಅವುಗಳ ಅರ್ಥವೇನು ಗೊತ್ತೇ? "ನಾವಿಬ್ಬರೂ ಒಟ್ಟಿಗೆ ಸಾಮರ್ಥ್ಯಶಾಲಿಗಳಾಗುವಂತಾಗಲಿ, ನಮ್ಮಿಬ್ಬರ ಅಧ್ಯಯನವು ತೇಜಸ್ವಿಯಾಗಲಿ, ಅಂದರೆ ನಾವು ಕಲಿತದ್ದೆಲ್ಲ ನಮ್ಮ ವ್ಯಕ್ತಿತ್ವದಲ್ಲಿ ಶಕ್ತಿ ತೇಜಸ್ಸುಗಳಾಗಿ ಹೊಮ್ಮಲಿ" ಎಂದು. ಇವಿಷ್ಟು ಶಿಕ್ಷಕರಲ್ಲಿ ಇರಬೇಕಾದ ಮನೋಭಾವಕ್ಕೆ ಸಂಬಂಧಿಸಿದ ವಿಷಯ.

ನಿಜಕ್ಕೂ, ವಿದ್ಯೆಯನ್ನು ಗಳಿಸುವುದು ಒಂದು ಬಗೆಯ ತಪಸ್ಸಾದರೆ, ಅದನ್ನು ಕಲಿಸುವುದು ಮತ್ತೊಂದು ಬಗೆಯ ತಪಸ್ಸು. "ಈ ಸ್ವಾಧ್ಯಾಯ – ಪ್ರವಚನಗಳೇ ಮಹಾತಪಸ್ಸು. ಅವುಗಳ ವಿಷಯದಲ್ಲಿ ಅಸಡ್ಡೆ ಮಾಡಬಾರದು" ಎನ್ನುತ್ತದೆ ತೈತ್ತಿರೀಯ ಉಪನಿಷತ್ತು.

ಅಲ್ಲದೆ, ಋಷಿ–ಮುನಿಗಳು **ಅಧ್ಯಾಪನಂ ಬ್ರಹ್ಮಯಜ್ಞಂ** – 'ಶಿಕ್ಷಣವು ಬ್ರಹ್ಮಯಜ್ಞ' ಎಂದು ಕರೆದಿರುವುದನ್ನು ಅಧ್ಯಾಪಕರು ಸದಾ ನೆನಪಿನಲ್ಲಿ ಇಟ್ಟಿರಬೇಕು. ಅಂದರೆ, ಯಜ್ಞವನ್ನು ಕೈಗೊಂಡವರು ಶಿಸ್ತು – ಸಂಯಮ – ಸದಾಚಾರಗಳಿಂದ ಕೂಡಿರಬೇಕು ಎಂಬುದು ಇದರ ಅಂತರಾರ್ಥ. ತಾವು ಕರಗತ ಮಾಡಿಕೊಂಡ ವಿಷಯವನ್ನು ಚ್ಯುತಿ ಇಲ್ಲದಂತೆ, ಒಲುಮೆ ತಾಳ್ಮೆಗಳಿಂದ ವಿದ್ಯಾರ್ಥಿಗಳಿಗೆ ಕಲಿಸುವುದೇ ಶಿಕ್ಷಕ ಮಾಡಬೇಕಾದ ಯಜ್ಞ – ಬ್ರಹ್ಮಯಜ್ಞ! ಇದರೊಂದಿಗೆ ಅವರು, ಅಧ್ಯಯನವೂ ಒಂದು ಮಹಾತಪಸ್ಸು ಎಂಬ ತಥ್ಯವನ್ನು ವಿದ್ಯಾರ್ಥಿಗಳಿಗೆ ಮನಗಾಣಿಸಬೇಕು. ಹೀಗೆ ಅಧ್ಯಯನ ಅಧ್ಯಾಪನಗಳನ್ನು ತಪಸ್ಸಿನಂತೆ, ಯಜ್ಞದೃಷ್ಟಿಯಿಂದ ಮಾಡಲು ತೊಡಗಿದರೆ ಶೈಕ್ಷಣಿಕ ಕ್ಷೇತ್ರದಲ್ಲಿ ಹೆಡೆಯಾಡುತ್ತಿರುವ ಸಕಲ ಸಮಸ್ಯೆಗಳೂ ತೊಲಗವೇನು?

ಕಡೆಯದಾದ, ಆದರೆ ಅತಿ ಮುಖ್ಯವಾದ ಮತ್ತೊಂದು ವಿಚಾರವನ್ನು ಹೇಳದಿರುವಂತಿಲ್ಲ. ಅದೇ ದೇಶಪ್ರೇಮ ಮತ್ತು ಸಾಮಾಜಿಕ ಪ್ರಜ್ಞೆ, ಎಂದರೆ ಸಮಷ್ಟಿ ಜೀವನವನ್ನು ಕುರಿತಾದ ಕಾಳಜಿ. ತಾನು – ತನ್ನದು ಎಂಬ ಸಂಕುಚಿತ ವಲಯದಲ್ಲೇ ಸ್ವಾರ್ಥದ ಕ್ರಿಮಿಯಾಗಿ ಸಾಯುವುದರ ಬದಲು, ಸರ್ವರ ಹಿತಚಿಂತನೆ ಮಾಡಲು ಸಮರ್ಥನಾದಾಗ ಮಾತ್ರ ಒಬ್ಬ ವ್ಯಕ್ತಿ ಪ್ರಬುದ್ಧನಾಗಿ ಅರಳುತ್ತಾನೆ; ಜೀವನದಲ್ಲಿ ಧನ್ಯತೆಯನ್ನು ಅನುಭವಿಸುತ್ತಾನೆ. ಈ ಸಾಮಾಜಿಕ ಪ್ರಜ್ಞೆಯನ್ನು ಎಳೆಯರಲ್ಲಿ ಎಳವೆಯಿಂದ ಬೆಳೆಸುವುದೇ ಒಳ್ಳೆಯದಲ್ಲವೆ!

ಇನ್ನು ದೇಶಪ್ರೇಮ ಎಂದರೇನೆಂಬುದು ಎಲ್ಲರಿಗೂ ತಿಳಿದಿದೆ ಅಥವಾ 'ತಿಳಿದಿದ್ದೇವೆ' ಎಂದು ಜನ ಭ್ರಮಿಸಿದ್ದಾರೆ. ಏಕೆಂದರೆ ಜನರ ಚಟುವಟಿಕೆಗಳನ್ನು ನೋಡಿದರೆ ಅವರಲ್ಲಿ ದೇಶಪ್ರೇಮವಿದೆಯೋ ಇಲ್ಲವೋ, ಸ್ವಾರ್ಥಪ್ರೇಮವಂತೂ ತುಂಬಿಕೊಂಡಿರುವುದು ಕಣ್ಣುಕುಕ್ಕುತ್ತದೆ. ಅಪರೂಪಕ್ಕೆ ಅಲ್ಲೊಬ್ಬರು ಇಲ್ಲೊಬ್ಬರು ಯಥಾರ್ಥ ದೇಶಭಕ್ತರಿದ್ದಾರೆ, ಸುತರಾಂ ಇಲ್ಲವೆಂದಲ್ಲ. ಆದರೆ ಅವರು ಬೆರಳೆಣಿಕೆಯಷ್ಟೇ ಜನ ! ಆದ್ದರಿಂದ, ದೇಶಪ್ರೇಮದ ಬಗ್ಗೆ ಜನರ ಕಲ್ಪನಾವಿನ್ಯಾಸಗಳೇನೇ ಇರಲಿ, ಅವರು ಸ್ವಾಮಿ ವಿವೇಕಾನಂದರ ವಾಣಿಗೆ ಕಿವಿಗೊಟ್ಟರೆ ರಾಷ್ಟ್ರದಲ್ಲಿ